# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -3
## S.S.L.C. MODEL QUESTION PAPER-3 : 2024-25

## ವಿಷಯ : ಸಮಾಜ ವಿಜ್ಞಾನ
## Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**ವಿಷಯ ಸಂಕೇತ : 85-K** — **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು ] — [ Time : 3 Hours 15 Minutes

ಗರಿಷ್ಠ ಅಂಕಗಳು : 80 ] — [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : $8 \times 1 = 8$**

1. ವೇದಗಳಿಗೆ ಹಿಂದಿರುಗಿ ಎನ್ನುವ ಘೋಷಣೆಯನ್ನು ಹೊರಡಿಸಿದವರು

    (A) ಆತ್ಮಾರಾಮ್ ಪಾಂಡುರಂಗ

    (B) ದಯಾನಂದ ಸರಸ್ವತಿ

    (C) ಸ್ವಾಮಿ ವಿವೇಕಾನಂದ

    (D) ರಾಜಾ ರಾಮ್‌ಮೋಹನ್ ರಾಯ್

2. ಕದನ ಬಾಂಧವ್ಯತ್ರಯ ಮೈತ್ರಿಕೂಟ ರಚಿಸಿಕೊಂಡ ರಾಷ್ಟ್ರಗಳ ಸರಿಯಾದ ಗುಂಪು

    (A) ಬ್ರಿಟನ್, ಫ್ರಾನ್ಸ್, ರಷ್ಯಾ

    (B) ಜರ್ಮನಿ, ಆಸ್ಟ್ರಿಯಾ, ಹಂಗೇರಿ, ಇಟಲಿ

    (C) ಇಟಲಿ, ಫ್ರಾನ್ಸ್, ರಷ್ಯಾ

    (D) ಜರ್ಮನಿ, ಆಸ್ಟ್ರೀಯಾ, ಹಂಗೇರಿ, ಫ್ರಾನ್ಸ್

3. ನೊಬೆಲ್ ಪ್ರಶಸ್ತಿ ಪಡೆದಿರುವ ವಿಶ್ವಸಂಸ್ಥೆಯ ವಿಶೇಷ ಸಂಸ್ಥೆ

    (A) ವಿಶ್ವ ಆರೋಗ್ಯ ಸಂಸ್ಥೆ WHO

    (B) ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ UNESCO

    (C) ಆಹಾರ ಮತ್ತು ಕೃಷಿ ಸಂಸ್ಥೆ FAO

    (D) ವಿಶ್ವಸಂಸ್ಥೆಯ ಅಂತಾರಾಷ್ಟ್ರಿಯ ಮಕ್ಕಳ ತುರ್ತು ನಿಧಿ UNICEF

4. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು

(A) ಸುಂದರ್‌ಲಾಲ್ ಬಹುಗುಣ

(B) ಚಂಡಿ ಪ್ರಸಾದ್ ಭಟ್ಟ

(C) ಶಿವರಾಮ ಕಾರಂತ

(D) ಮೇಧಾ ಪಾಟ್ಕರ್

5. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಆವರ್ತ ಮಾರುತಗಳು ಬಂಗಾಳಕೊಲ್ಲಿಯಲ್ಲಿ ನಿರ್ಮಿತಗೊಳ್ಳಲು ಕಾರಣ

(A) ಭೂಮಿ ಮತ್ತು ಸಾಗರಗಳ ನಡುವಿನ ಉಷ್ಣಾಂಶ ಮತ್ತು ಒತ್ತಡಗಳಲ್ಲಿನ ವ್ಯತ್ಯಾಸ

(B) ಉತ್ತರಾರ್ಧಗೋಳದ ಮೇಲೆ ಸೂರ್ಯನ ಲಂಬ ಕಿರಣಗಳು ಬಿದ್ದು ಉಷ್ಣಾಂಶ ಹೆಚ್ಚಾಗುತ್ತದೆ

(C) ಈ ಪ್ರದೇಶಗಳು ಸಮುದ್ರಮಟ್ಟದಿಂದ ಅತಿ ಎತ್ತರದಲ್ಲಿರುವುದರಿಂದ

(D) ಉತ್ತರ ಭಾರತವು ಸಮುದ್ರದಿಂದ ಬಹುದೂರದಲ್ಲಿರುವುದರಿಂದ

6. ಸಂಘಟಿತ ಕಾರ್ಮಿಕ ವಲಯಕ್ಕೆ ಒಂದು ಉತ್ತಮ ಉದಾಹರಣೆ

(A) ಮನೆಗೆಲಸಗಾರರು

(B) ಕೃಷಿ ಕಾರ್ಮಿಕರು

(C) ಸರ್ಕಾರಿ ನೌಕರರು

(D) ತಳ್ಳುಗಾಡಿ ವ್ಯಾಪಾರಿಗಳು

7. ಆಡಳಿತ ವಿಕೇಂದ್ರೀಕರಣಕ್ಕಾಗಿ ಭಾರತದಲ್ಲಿ ಜಾರಿಗೆ ತಂದಿರುವ ಪದ್ಧತಿ

(A) ಪಂಚಾಯತ್‌ರಾಜ್

(B) ಸ್ತ್ರೀಶಕ್ತಿ

(C) ನರೇಗಾ

(D) ಗ್ರಾಹಕ ನ್ಯಾಯಾಲಯ

8. ಇವರು ಜಿಲ್ಲಾ ಗ್ರಾಹಕ ಮಂಡಳಿ ಅಧ್ಯಕ್ಷರಾಗಿರುತ್ತಾರೆ

(A) ಜಿಲ್ಲಾ ನ್ಯಾಯಾಧೀಶರು

(B) ಜಿಲ್ಲಾಧಿಕಾರಿಗಳು

(C) ಗ್ರಾಹಕ ನ್ಯಾಯಾಲಯದ ಅಧ್ಯಕ್ಷರು

(D) ರಾಜ್ಯದ ಮುಖ್ಯ ನ್ಯಾಯಾಧೀಶರು

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಸಂಸ್ಥೆಯನ್ನು ಏಕೆ ಸ್ಥಾಪಿಸಿದರು ?

10. ಗೋಬೆಲ್ಸ್ ಎಂಬ ವಿಶೇಷ ಮಂತ್ರಿಯನ್ನು ಹಿಟ್ಲರ್ ನೇಮಿಸಿದ ಉದ್ದೇಶವೇನು ?

11. ವಿಶ್ವಸಂಸ್ಥೆಯ ದತ್ತಿ ಸಮಿತಿಯನ್ನು ಏಕೆ ಸ್ಥಾಪಿಸಲಾಗಿತ್ತು ?

12. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು ?

13. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ ಯಾವುದು ?

14. ಗ್ರಾಮೀಣಾಭಿವೃದ್ಧಿ ಎಂದರೇನು ?

15. ಮಾರ್ಚ್ 15 ರಂದೆ ಪ್ರತಿವರ್ಷ ವಿಶ್ವ ಗ್ರಾಹಕರ ದಿನಾಚರಣೆ ಆಚರಿಸಲಾಗುತ್ತದೆ. ಏಕೆ ?

16. ಅಂತಾರಾಷ್ಟ್ರೀಯ ಮೌಲ್ಯ ನಿರ್ಧಾರಕ್ಕೆ ಮಾಧ್ಯಮವಾಗಿ ಬಳಸಲ್ಪಡುವ ಲೋಹ ಯಾವುದು ?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 8 × 2 = 16**

17. ಭಾರತದಲ್ಲಿ ನಿರುದ್ಯೋಗಕ್ಕೆ ಕಾರಣವಾಗುವ ಅಂಶಗಳು ಯಾವುವು ?

**ಅಥವಾ**

ಬಾಲ್ಯ ವಿವಾಹದ ಪರಿಣಾಮಗಳಾವುವು ?

18. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರದ ಪಾತ್ರವೇನು ?

**ಅಥವಾ**

ಅನಕ್ಷರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

19. ಯುರೋಪಿಯನ್ನರು ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ಅಂಶಗಳು ಯಾವುವು ?

20. ಸಹಾಯಕ ಸೈನ್ಯ ಪದ್ಧತಿಯು ದೇಶಿಯ ರಾಜರುಗಳನ್ನು ಬಲಹೀನಗೊಳಿಸಿತು. ಹೇಗೆ ?

21. ಮಣ್ಣಿನ ಸವೆತದಿಂದಾಗುವ ಪರಿಣಾಮಗಳೇನು ?

22. ಅರಣ್ಯಗಳನ್ನು ನಾವು ಹೇಗೆ ಸಂರಕ್ಷಿಸಬಹುದು ?

23. ಪ್ರತ್ಯಕ್ಷ ತೆರಿಗೆಗಳು ಪರೋಕ್ಷ ತೆರಿಗೆಗಳಿಗಿಂತ ಹೇಗೆ ಭಿನ್ನವಾಗಿವೆ ?

24. ಉಳಿತಾಯ ಬ್ಯಾಂಕ್ ಖಾತೆಗಳು ಚಾಲ್ತಿ ಬ್ಯಾಂಕ್ ಖಾತೆಗಳಿಗಿಂತ ಭಿನ್ನವಾಗಿವೆ. ವಿವರಿಸಿ.

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 9 × 3 = 27**

25. ರೈತವಾರಿ ಪದ್ಧತಿಯು ಒಳಗೊಂಡಿದ್ದ ಅಂಶಗಳನ್ನು ವಿವರಿಸಿ.

**ಅಥವಾ**

ಸಂಗೊಳ್ಳಿ ರಾಯಣ್ಣನು ಬ್ರಿಟಿಷರ ವಿರುದ್ಧ ಹೋರಾಡಿದ ಕ್ರಮವನ್ನು ವಿವರಿಸಿ.

26. ಭಾರತ ಅಭಿವೃದ್ಧಿಯತ್ತ ಸಾಗಲು ಪಂಚವಾರ್ಷಿಕ ಯೋಜನೆಗಳು ಹೇಗೆ ಕಾರಣವಾದವು ?

**ಅಥವಾ**

ಗ್ರಾಮೀಣಾಭಿವೃದ್ಧಿಯಾಗಲು ಮಹಿಳೆಯರು ಹೇಗೆ ಪ್ರಮುಖರಾಗುತ್ತಾರೆ ?

27. ಬ್ಯಾಂಕುಗಳು ಗ್ರಾಹಕರಿಗೆ ಹೇಗೆ ಸಹಕಾರಿಯಾಗಿವೆ ?

**ಅಥವಾ**

ಉದ್ಯಮದಾರರು ದೇಶದ ಆರ್ಥಿಕತೆಯಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತಾರೆ ?

28. ಕೈಗಾರಿಕೆಗಳ ಸ್ಥಾನೀಕರಣಕ್ಕೆ ಸಹಾಯಕವಾಗುವ ಅಂಶಗಳು ಯಾವುವು ?

**ಅಥವಾ**

ಭಾರತದ ಕೈಗಾರಿಕಾ ಕೇಂದ್ರಗಳು ಯಾವುವು ?

29. ಭಾರತದ ಸಾಮಾಜಿಕ ಸುಧಾರಣೆಗೆ ದಯಾನಂದ ಸರಸ್ವತಿ ಹಾಗೂ ರಾಜಾ ರಾಮ್‌ಮೋಹನ್ ರಾಯ್‌ರ ಕೊಡುಗೆಗಳೇನು ?

30. 1857 ರ ಮಹಾದಂಗೆಯು ವಿಫಲವಾಗಲು ಕಾರಣಗಳೇನು ?

31. ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಭಾರತ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದೆ. ಸಮರ್ಥಿಸಿ.

32. ಸಾಮಾಜಿಕ ಸ್ಥರವಿನ್ಯಾಸವನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

33. ಭಾರತದ ರಸ್ತೆ ಸಾರಿಗೆಯು ಇತರ ಸಾರಿಗೆಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಹೇಗೆ ?

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 4 × 4 = 16**

34. ಭಾರತದಲ್ಲಿ ಬ್ರಿಟಿಷ್ ಶಿಕ್ಷಣದಿಂದಾದ ಪರಿಣಾಮಗಳನ್ನು ವಿವರಿಸಿ.

**ಅಥವಾ**

ಭಾರತದ ಒಕ್ಕೂಟಕ್ಕೆ ಜಮ್ಮು-ಕಾಶ್ಮೀರ ವಿಲೀನಗೊಂಡ ಪ್ರಕ್ರಿಯೆಯನ್ನು ವಿವರಿಸಿ.

35. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವೇನು ?

36. ಬೆಳೆ ಮಾದರಿಗಳನ್ನು ನಿರ್ಧರಿಸುವ ಅಂಶಗಳು ಯಾವುವು ?

37. ಲಿಂಗ ತಾರತಮ್ಯ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

**VI.** 38. **ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ 5 ನ್ನು ಗುರುತಿಸಿ :**

**1 × 5 = 5**

a) ನಾಗಾರ್ಜುನ ಸಾಗರ

b) ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

c) ಕೋರಮಂಡಲ ತೀರ

d) ವಿಂಧ್ಯ ಪರ್ವತಗಳು

e) ಪಾಕ್ ಜಲಸಂಧಿ

f) ಉತ್ಕಲ ತೀರ

g) ಭಾರತದ ಹೆಬ್ಬಾಗಿಲು

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳೇನು ? **5**